ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರ್ : ಈಗಾಗಲೇ ನಾವು ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಪ್ರತಿಯೊಂದು ಜಿಲ್ಲೆಗೆ ಎಷ್ಟೆಷ್ಟು ಕೊಡಬೇಕೋ ಅದನ್ನು ಈಗಾಗಲೇ ಕೊಟ್ಟಿದ್ದೇವೆ. ಇನ್ನೂ ಕೆಲವು ಕಡೆ ಉಳಿದಿದ್ದರೆ, 15 ದಿನಗಳಲ್ಲೇ 30 ಕೋಟಿ ರೂಪಾಯಿಗಳನ್ನು ಉಳಿದ ಜಿಲ್ಲೆಗಳಿಗೂ ಬಿಡುಗಡೆ ಮಾಡುತ್ತಿದ್ದೇವೆ. ಯಾವುದನ್ನೂ ನಾವು ಪೆಂಡಿಂಗ್ ಇಟ್ಟಿಲ್ಲ, ಶೀಘ್ರಗತಿಯಿಂದ ನಾವು ಕೆಲಸ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬೆಂಗಳೂರಿಗೆ ಬರುವುದನ್ನು ತಪ್ಪಿಸಬೇಕು. ಎಲ್ಲರೂ ಬೆಂಗಳೂರಿಗೆ ಬರುವಂಥ ಸ್ಥಿತಿಯಾಗಿದೆ, ಇದರಿಂದ ಬಹಳ ತೊಂದರೆಯಾಗಿದೆ.

ಅಧ್ಯಕ್ಷರು : ಬೆಂಗಳೂರಿಗೆ ಬರುವುದನ್ನು ತಪ್ಪಿಸಿ ಎಂದು ಹೇಳುತ್ತಿದ್ದಾರೆ. ಅದನ್ನು ಹೇಳಿ.

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರ್ : ಈಗಾಗಲೇ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು 15 ದಿನಗಳಲ್ಲಿ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತಿದ್ದೇನಲ್ಲಾ.

ಅಧ್ಯಕ್ಷರು : ನೀವು ಹೇಳಿದ್ದನ್ನೇ ಹೇಳುತ್ತಿದ್ದೀರಿ, ಅವರು ಕೇಳಿದ್ದನ್ನೇ ಕೇಳುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರಿಗೆ ನಾವು ಹೇಳಿದ್ದು ಅರ್ಥವಾಗಲಿಲ್ಲ. ಬೆಂಗಳೂರಿಗೆ ಬರುವುದನ್ನು ತಪ್ಪಿಸುತ್ತೀರಾ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು : ಪರಿಶೀಲಿಸುತ್ತೇವೆ ಎಂದು ಹೇಳಿ.

ಶ್ರೀ ಬಾಬುರಾವ್ ಬಸವಣಪ್ಪ ಚಿಂಚನಸೂರ್ : ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು : ಆಯಿತು, ಈಗ ಮುಂದಿನ ಪ್ರಶ್ನೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಂತ್ರಿಗಳ ಪರವಾಗಿ ನೀವೇ ಉತ್ತರ ಕೊಟ್ಟುಬಿಡಿ. ಅವರಿಂದ ಏಕೆ ಹೇಳಿಸುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೇ, ತಾವು ಮಂತ್ರಿಗಳ ಸಹಾಯಕ್ಕೆ ಬಂದಿರಿ, ಆದರೆ ಅಲ್ಲಿಂದ ಬೆಂಗಳೂರಿಗೆ ಬರುವಂಥವರ ಸಹಾಯಕ್ಕೆ ಯಾರು ಬರುತ್ತಾರೆ ಎಂದು ಹೇಳಿ.

ಅಧ್ಯಕ್ಷರು : ಅದಕ್ಕೋಸ್ಕರವೇ ಈಗ ನಾನು ಸಹಾಯಕ್ಕೆ ಬಂದದ್ದು. ಬೆಂಗಳೂರಿಗೆ ಬರುವಂಥವರ ಸಹಾಯಕ್ಕೋಸ್ಕರವಾಗಿಯೇ ನಾನು ಅವರಿಗೆ ಹೇಳಿದ್ದು ಅಷ್ಟೇ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಮಂತ್ರಿಗಳ ಸಹಾಯಕ್ಕೆ ಬಂದದ್ದು ಒಳ್ಳೆಯದು. ಇಡೀ ರಾಜ್ಯದಿಂದ ಇಲ್ಲಿಗೆ ಬರಬೇಕಲ್ಲಾ. ಅವರ ಸಹಾಯಕ್ಕೆ ಬರುವವರು ಯಾರು?

ಅಧ್ಯಕ್ಷರು : ನಿಮಗೆ ಸಹಾಯವಾಗಬೇಕು ಎಂದೇ ನಾನು ಮಂತ್ರಿಗಳಿಗೆ, ಪರಿಶೀಲಿಸುತ್ತೇವೆ ಎಂದು ಹೇಳಿ, ಎಂದು ಹೇಳಿಕೊಟ್ಟಿದ್ದು. ಈಗ ಮುಂದಿನ ಪ್ರಶ್ನೆ.

ಶಿವಮೊಗ್ಗ ನಗರದ ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆ

596 (3941) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಶಿವಮೊಗ್ಗ ನಗರಸಭಾ ವ್ಯಾಪ್ತಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಮೂರನೇ ಹಂತದ ಕುಡಿಯುವ ನೀರಿನ ಯೋಜನೆ ಯಾವಾಗ ಪ್ರಾರಂಭವಾಗುವುದು; ಈ ಯೋಜನೆಯ ಅಂದಾಜು ವೆಚ್ಚವೆಷ್ಟು?

2) ಇದರಿಂದ ಶಿವಮೊಗ್ಗ ನಗರಸಭೆ ವ್ಯಾಪ್ತಿಗೆ ಒಳಪಟ್ಟಿರುವ 24 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದೇ: (ವಿವರ ನೀಡುವುದು)

3) ಶಿವಮೊಗ್ಗ ನಗರಸಭಾ ವ್ಯಾಪ್ತಿಯಲ್ಲಿ ಹೊಸದಾಗಿ ಕೈಗೊಳ್ಳಲು ಉದ್ದೇಶಿಸಿರುವ ಒಳಚರಂಡಿ ಯೋಜನೆ ಯಾವಾಗ ಪ್ರಾರಂಭಿಸಲಾಗುವುದು; ಹಾಲಿ ಯಾವ ಹಂತದಲ್ಲಿರುತ್ತದೆ: ಹಾಗೂ ಈ ಯೋಜನೆ ಅಂದಾಜು ವೆಚ್ಚವೆಷ್ಟು?

4) ನಗರಸಭೆ ವ್ಯಾಪ್ತಿಗೆ ಒಳಪಟ್ಟಿರುವ ಗ್ರಾಮೀಣ ಪ್ರದೇಶಗಳಿಗೂ ಈ ಯೋಜನೆಯಿಂದ ಪ್ರಯೋಜನವಾಗುವುದೇ? (ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

1) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಶಿವಮೊಗ್ಗ ನಗರದ ಮೂರನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ರೂ. 30.00 ಕೋಟಿಗಳ ಅಂದಾಜಿನಲ್ಲಿ ತಯಾರಿಸುತ್ತಿದ್ದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಪರಿಶೀಲಿಸಲಾಗುವುದು.

2) ಪ್ರಸ್ತಾವನೆ ಸರ್ಕಾರಕ್ಕೆ ಬಂದಿಲ್ಲವಾದ್ದರಿಂದ ಉದ್ಭವಿಸುವುದಿಲ್ಲ.

3) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಶಿವಮೊಗ್ಗ ನಗರದ ಮೂರನೇ ಹಂತದ ಒಳಚರಂಡಿ ಯೋಜನೆಯನ್ನು ರೂ. 30.00 ಕೋಟಿಗಳ ಅಂದಾಜಿನಲ್ಲಿ ತಯಾರಿಸಿದ್ದು ಅದನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಪರಿಶೀಲಿಸಲಾಗುವುದು.

4) ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿಲ್ಲವಾದ್ದರಿಂದ ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಈಗಾಗಲೇ ಸರ್ಕಾರಕ್ಕೆ 30 ಕೋಟಿ ರೂಪಾಯಿ ಅಂದಾಜು ವೆಚ್ಚದ ಮನವಿಯನ್ನು ಸಲ್ಲಿಸಿದೆ. ಅದನ್ನು ಆದಷ್ಟು ಜಾಗ್ರತೆ ಬಿಡುಗಡೆ ಮಾಡಿಕೊಟ್ಟರೆ, ಆ ಭಾಗಕ್ಕೆ ಮೂರನೇ ಹಂತದ ನೀರನ್ನು ಕೊಡಲು ಅವಕಾಶವಾಗುತ್ತದೆ. ಏಕೆಂದರೆ, ಶಿವಮೊಗ್ಗ ನಗರ ದಿನೇದಿನೇ ಬೆಳೆಯುತ್ತಿದೆ. ಸುಮಾರು 2,70,000 ಜನಸಂಖ್ಯೆ ಇರತಕ್ಕಂಥ ಈ ಭಾಗದ ಮಲೆನಾಡು ಪ್ರಾಂತ್ಯಕ್ಕೆ ಕೇಂದ್ರ ಬಿಂದುವಾಗಿರತಕ್ಕಂಥ ಈ ಪ್ರದೇಶಕ್ಕೆ ಅನುಕೂಲವಾಗುವಂತೆ ಆದಷ್ಟು ಜಾಗ್ರತೆಯಾಗಿ ಒಪ್ಪಿಗೆ ಕೊಡಬೇಕು. ಇದರ ಜೊತೆಗೆ, ಅಲ್ಲಿ ಯು ಜಿ ಡಿ ಯನ್ನೂ ಕೂಡ ಆದಷ್ಟು ಜಾಗ್ರತೆ ಮಾಡಿಕೊಟ್ಟರೆ ಒಳ್ಳೆಯದು. ಈಗ ಅಲ್ಲಿ ಕೇವಲ ಅರ್ಧ ಭಾಗ ಮಾತ್ರ ಯು.ಜಿ.ಡಿ. ಆಗಿದೆ. ಅದು ಪೂರ್ತಿಯಾಗಬೇಕು. 24 ಹಳ್ಳಿಗಳೂ ಕೂಡ, ಹಿಂದೆ ಕಾರ್ಪೊರೇಷನ್ ಆಗಿದ್ದಾಗ ಅದು ನಗರಸಭೆಗೆ ಸೇರಿದೆ. ಅದಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಅದಕ್ಕೆ ಪೂರ್ಣ ಮಂಜೂರಾತಿಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಈಗಾಗಲೆ ಮಹತ್ವಾಕಾಂಕ್ಷೆಯುಳ್ಳಂಥ ಒಂದು ಕುಡಿಯುವ ನೀರಿನ ಯೋಜನೆಯನ್ನು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಬೇಕು ಎಂದು

ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮುಂದಿವರೆಸಿದೆ. 30 ಕೋಟಿ ರೂಪಾಯಿಗಳಿಗೂ ಹೆಚ್ಚಿನ ವೆಚ್ಚವನ್ನು ಇದಕ್ಕೆ ಯೋಜಿಸಲಾಗಿದೆ. ಬರತಕ್ಕಂಥ ಕಾಲದಲ್ಲಿ ಇರತಕ್ಕಂಥ ಹಳ್ಳಿಗಳಿಗೂ ಕೂಡ ಕುಡಿಯುವ ನೀರನ್ನು ಒದಗಿಸಿಕೊಡಬೇಕು ಎನ್ನತಕ್ಕಂಥ ನಮ್ಮ ಸರ್ಕಾರದ ಅಮೆಂಡೆಡ್ ಪಾಲಿಸಿ ಏನಿದೆ, ಆ ಪಾಲಿಸಿ ಪ್ರೊಕ್ಟಿನಲ್ಲಿ 23 ಗ್ರಾಮಗಳಿಗೂ ಕೂಡ ಕುಡಿಯುವ ನೀರನ್ನು ಪ್ರತೀ ದಿವಸ 135 ಲೀಟರ್‌ನಂತೆ ಕೊಡಬೇಕೆಂದು 40 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದೇವೆ. ಅದನ್ನು ನಾವು ಜಾರಿಗೆ ಕೊಡುತ್ತೇವೆ.

ಇ-ಆಡಳಿತ ಕಾರ್ಯಕ್ರಮ

348 (3158) : ಶ್ರೀ ಸಭಾಪತಿ ಯು.ಆರ್. (ಉಡುಪಿ), : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರ ತನ್ನ ಇ-ಆಡಳಿತ (e-Governance) ಜಾರಿಗೆ ತಂದಿದ್ದು ಇದರ ಜಿಲ್ಲಾವಾರು ಪ್ರಗತಿಯ ವಿವರಗಳನ್ನು ತಿಳಿಸುವುದು;

ಆ) ವಿಧಾನಸೌಧ, ಬಹುಮಹಡಿ ಕಟ್ಟಡಗಳಲ್ಲಿನ ಸಚಿವಾಲಯದಲ್ಲಿ ಅನುಷ್ಠಾನಕ್ಕೆ ಬಂದಿರುವ (31.3.2003)ರವರೆಗೆ ಇ-ಆಡಳಿತ ಕಾರ್ಯಕ್ರಮದ ಪ್ರಗತಿಯ ವಿವರ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) ಸರ್ಕಾರವು ತನ್ನ ಇ-ಆಡಳಿತ ಕಾರ್ಯನೀತಿಯನ್ನು ದಿ: 22-8-2002ರಂದು ಪ್ರಕಟಿಸಿದೆ. ಅದರನ್ವಯ, ವಿವಿಧ ಮೈಲಿಗಲ್ಲುಗಳನ್ನು ಗೊತ್ತುಪಡಿಸಲಾಗಿದೆ. ಪ್ರಸ್ತುತ, ಇ-ಆಡಳಿತ ಕಾರ್ಯಚಟುವಟಿಕೆಗಳಿಗೆ ಒತ್ತು ನೀಡುವುದಕ್ಕಾಗಿ ಕಾರ್ಯದರ್ಶಿ, ಇ-ಆಡಳಿತ ಹುದ್ದೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕೆಳಗೆ ನೀಡಲಾಗಿದೆ. ಇ-ಆಡಳಿತ ಕಾರ್ಯನೀತಿಯಲ್ಲಿ ಜಿಲ್ಲಾವಾರು ಕಾರ್ಯಕ್ರಮಗಳನ್ನು ಉದ್ದೇಶಿಸಿರುವುದಿಲ್ಲ. ಇ-ಆಡಳಿತ ಕಾರ್ಯಕ್ರಮಗಳು ನಾಗರಿಕ ಅವಶ್ಯಕತೆಗಳನ್ನು ಆಧರಿಸಿವೆ ಮತ್ತು ವಿವಿಧ ಕ್ಷೇತ್ರ ಇಲಾಖೆಗಳಿಂದ ನಿರ್ವಹಿಸಲ್ಪಡುತ್ತವೆ.

ಆ) ಸಚಿವಾಲಯದಲ್ಲಿ, ಆಧುನಿಕ ರೀತಿಯ ಪ್ರಾದೇಶಿಕ ಕ್ಷೇತ್ರ ಗಣಕ ಜಾಲ (Local Area Network) ನ್ನು ಅಳವಡಿಸಲಾಗಿದೆ. 700ಕ್ಕಿಂತ ಹೆಚ್ಚು ಗಣಕಯಂತ್ರಗಳನ್ನು ಶಾಖಾಧಿಕಾರಿ ಹಂತದವರೆಗೆ ಒದಗಿಸಲಾಗಿದೆ. ಕಡತ ನಿರ್ವಹಣಾ ಪದ್ಧತಿ, ಪತ್ರ ನಿರ್ವಹಣಾ ಪದ್ಧತಿ, ಇ-ಮೈಲ್, ಇಂಟರ್ ನೆಟ್ ಮುಂತಾದ ತಂತ್ರಾಂಶಗಳನ್ನು ಆಯೋಜಿಸಲಾಗಿದೆ. ಒಂದು ವೆಬ್ ಸರ್ವರ್ ಮತ್ತು ಬೃಹತ್ ಇ-ಮೈಲ್ ಸರ್ವರ್ ಅನ್ನು ಸದ್ಯದಲ್ಲೇ ಅಳವಡಿಸಲು ಯೋಜಿಸಲಾಗಿದೆ. ರಜಾ ನಿರ್ವಹಣಾ ವ್ಯವಸ್ಥೆ, ಸಿಬ್ಬಂದಿ ಮಾಹಿತಿ ವ್ಯವಸ್ಥೆ, ನಾಲೆಡ್ಜ್ ಅಡ್ಮಿನಿಸ್ಟ್ರೇಷನ್ ಸಿಸ್ಟಮ್ ಮುಂತಾದ ಹೊಸ ಪ್ಯಾಕೇಜ್‌ಗಳನ್ನು ಮುಂಬರುವ ವರ್ಷಗಳಲ್ಲಿ ಅಳವಡಿಸಲು ಯೋಜಿಸಲಾಗಿದೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನದ ಅನುಷ್ಠಾನದ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಆಡಳಿತದಲ್ಲಿ, ಇ-ಆಡಳಿತ ಕಾರ್ಯನೀತಿಯಲ್ಲಿ ಜಿಲ್ಲಾವಾರು ಕಾರ್ಯಕ್ರಮಗಳನ್ನು ಉದ್ದೇಶಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಒಂದು ಜಿಲ್ಲೆಯನ್ನು ಪೈಲಟ್ ಪ್ರಾಜೆಕ್ಟ್ ಆಗಿ ತೆಗೆದುಕೊಂಡು ಸಂಪೂರ್ಣವಾಗಿ 'ಇ-ಆಡಳಿತವನ್ನು' ಒಂದು ಕಾರ್ಯರೂಪಕ್ಕೆ ತರುವಂಥ ಕಾರ್ಯ ಕ್ರಮವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಹಾಗೆಯೇ ಕೆಲವು ಗ್ರಾಮಪಂಚಾಯತಿ ವ್ಯಾಪ್ತಿಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಗಣಕೀಕರಣ ಮಾಡುವ ವ್ಯವಸ್ಥೆಗೆ ನಾವು ಶಾಸಕರ